೮) ಪುತ್ತೂರು ಗ್ರಾಮಾಂತರ ಪೋಲೀಸ್ ಠಾಣೆಯನ್ನು ತೆರೆಯುವ ಬಗ್ಗೆ

ಶ್ರೀ ವಿನಯ ಕುಮಾರ ಸೊರಕೆ (ಪುತ್ತೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಪೋಲೀಸ್ ಠಾಣೆಗೆ ಸುಮಾರು ೩೬ ಗ್ರಾಮಗಳ ವ್ಯಾಪ್ತಿ ಇರುತ್ತದೆ. ಸುತ್ತಲೂ ಕೇರಳ ಗಡಿ ಪ್ರದೇಶ, ಬೆಳೆಯುತ್ತಿರುವ ಉದ್ದಿಮೆಗಳು ಕೃಷಿ ಉತ್ಪನ್ನಗಳ ವ್ಯಾಪಾರ ಕೇಂದ್ರ ಅನೇಕ ವಿದ್ಯಾ ಸಂಸ್ಥೆಗಳ ತವರು, ಪ್ರಸಿದ್ಧ ಯಾತ್ರಾಸ್ಥಳಗಳಿಗೆ ಹೋಗುವ ಮಾರ್ಗ ಈ ಎಲ್ಲ ಅನುಕೂಲಗಳಿರುವ ಪುತ್ತೂರಿಗೆ ಟೌನ್ ಹಾಗೂ ರೂರಲ್ ಪೋಲೀಸ್ ಸ್ಟೇಷನ್ ಪ್ರತ್ಯೇಕವಾಗಿ ರಚಿತವಾಗಬೇಕೆಂಬ ಬೇಡಿಕೆ ಹಲವಾರು ವರ್ಷಗಳಿಂದ ಇದ್ದರೂ ಇನ್ನೂ ಕಾರ್ಯಗತವಾಗಿಲ್ಲ. ಸುವ್ಯವಸ್ಥಿತ ಶಾಂತಿ ಪಾಲನೆಯ ದೃಷ್ಟಿಯಿಂದ ಇನ್ನಾದರೂ ಪುತ್ತೂರು ಪೋಲೀಸ್ ಠಾಣೆಯನ್ನು ಟೌನ್ ಹಾಗೂ ರೂರಲ್ ಠಾಣೆಯನ್ನಾಗಿ ಪರಿವರ್ತಿಸಿ, ಸಾಕಷ್ಟು ಹೆಚ್ಚಿಗೆ ಸಿಬ್ಬಂದಿ ನೇಮಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—೫ ವರ್ಷದ ಯೋಜನೆ ಮಾಡಿಕೊಂಡಿದ್ದಾರೆ. ಹಣ ಸಿಕ್ಕಿದ ಹಾಗೆ ಮಾಡಿಕೊಂಡು ಹೋಗುತ್ತಾ ಇದ್ದಾರೆ. ೧೯೮೬-೯೦ನೇ ಸಾಲಿನ ಯೋಜನೆ ಹಾಕಿಕೊಂಡಿದ್ದಾರೆ. ಮುಂಚಿತವಾಗಿ ಹಣ ಸಿಕ್ಕಿದರೆ ಅದಕ್ಕಿಂತ ಮುಂಚಿತವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

೯) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿ ಭೂರಹಿತ ಬಡಪರಿಗೆ ಐದು ಸೆಂಟ್ಸು ವಸತಿ ನಿವೇಶನ ಕೊಡತಕ್ಕಂಥದ್ದನ್ನು ಗ್ರಾಮ ಲೆಕ್ಕಿಗರು ಪಡೆದುಕೊಂಡಿರುವುದು

ಶ್ರೀ ಬಸವರಾಜ್ (ಬ್ರಹ್ಮಾವರ).—ಮಾನ್ಯ ಅಧ್ಯಕ್ಷರೆ, ಭೂ ರಹಿತ ಬಡವರಿಗೆ ತಲಾ ೫ ಸೆಂಟು ಗಳಂತೆ ವಸತಿ ನಿವೇಶನ ನೀಡಬೇಕೆಂಬುದು ಬಹು ವರ್ಷಗಳಿಂದ ಸರಕಾರದ ಧೋರಣೆಯಾಗಿದೆ. ಅಂಗೀಕೃತ ನೀತಿ ಹೀಗಿದ್ದರೂ ಸಾಕಷ್ಟು ಭೂರಹಿತ ಬಡವರಿಂದ ಅರ್ಜಿಗಳಿದ್ದರೂ ಅದಕ್ಕೆ ಕೆಲವಡೆ ಮೌನ್ಯತೆ ಏಗದ್ದಿರುವುದು ತೀರ ದುರ್ದೈವ. ಉದಾಹರಣೆಗೆ, ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಪಾರಂಬಳ್ಳಿ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ತಾಗಿ ಇರುವ ನಿವೇಶನದಲ್ಲಿ ಅರೇಳು ಜನ ಗ್ರಾಮಲೆಕ್ಕಿಗರಿಗೆ ತಲಾ ೫ ಸೆಂಟುಗಳು ನೀಡಲಾಗಿದೆಯೆಂದು ತಿಳಿದು ಬಂದಿದೆ. ಬ್ರಹ್ಮಾವರ ಪೇಟೆಗೆ ಸಮೀಪದ ರಾಷ್ಟ್ರೀಯ ಹೆದ್ದಾರಿ ಪಕ್ಕದ ಈ ಜಾಗಕ್ಕೆ ಈಗ ಮಾರುಕಟ್ಟೆ ಬೆಲೆ ರೂಂಟಿಗೆ ಐದು ಸಾವಿರ ರೂಪಾಯಿಯಷ್ಟಿದೆ. ಸ್ಥಳೀಯರೂ ಅಲ್ಲದ, ಬಡವರೂ ಅಲ್ಲದ, ಭೂರಹಿತರೂ ಅಲ್ಲದ ಸರಕಾರಿ ಉದ್ಯೋಗಿಗಳಿಗೆ ಈ ನಿವೇಶನ ನೀಡಿದ್ದು ತೀರ ಅಕ್ರಮ. ಈ ಕುರಿತು ತನಿಖೆ ಮಾಡಿ ಎಂದು ತಹಸೀಲ್ದಾರರಿಗೆ ಉಪವಿಭಾಗಾಧಿಕಾರಿಗಳಿಗೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದರೂ ಫಲಕಾರಿಯಾಗಿಲ್ಲ. ಅದರ ಬದಲು, ಯಾರ ಮೇಲೆ ದೂರು ಇದೆಯೋ ಅವರಿಗೆ ಅದನ್ನು ಕಳುಹಿಸಿದ್ದರಿಂದಾಗಿ ದೂರು ಸಲ್ಲಿಸಿದವರನ್ನೇ ಬೆದರಿಸಲಾಗುತ್ತಿದೆ ಅನ್ಯಾಯದ ಕುರಿತು ಪ್ರತಿಭಟಿಸುವುದು ಈ ಸಮಾಜದಲ್ಲಿ ಈ ಸರಕಾರದಲ್ಲಿ ತಪ್ಪು ಎಂಬ ಭಾವನೆ ಸರಕಾರ ತಾಳಿದೆಯೇ ? ಈ ಕುರಿತು ಇನ್ನಾದರೂ ಸೂಕ್ತ ಕ್ರಮಕ್ಕೆಕೊಂಡು ಅನರ್ಹರಿಗೆ ಭೂಮಿ ಕೊಟ್ಟದ್ದನ್ನು ಪಜಾಪಾಡಿ ಅರ್ಹರಿಗೆ ನೀಡುತ್ತೀರಾ ಎಂದು ತಮ್ಮ ಮುಖೇನ ಕೇಳಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ತರಿಸಿ ಕೊಡುತ್ತೇನೆ.

೧೦) ಬೈಂದೂರಿನಲ್ಲಿ ಪ್ರಥಮ ದರ್ಜೆ ಕಾಲೇಜು ಕಟ್ಟಡದ ನಿರ್ಮಾಣದ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಕಳೆದ ಮೂರೂವರೆ ವರ್ಷಗಳ ಹಿಂದೆ ಪ್ರಾರಂಭಿಸಲ್ಪಟ್ಟ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅಲ್ಲಿಂದ ಇಂದಿನತನಕವೂ, ಅಲ್ಲಿನ ಸರಕಾರಿ ಪದವಿಪೂರ್ವ ಕಾಲೇಜು, ಕಟ್ಟಡದಲ್ಲಿ ನಡೆಯುತ್ತಿದೆ. ಇದರಿಂದಾಗಿ ಉಭಯ ಸಂಸ್ಥೆಗಳಿಗೂ ತುಂಬ ತೊಂದರೆ, ಕಟ್ಟಡ ಕಟ್ಟಿಸಲು ಜಾಗ ಇದ್ದಲ್ಲಿ ಖಂಡಿತ ಕ್ರಮ ಕೈಕೊಳ್ಳುವುದಾಗಿ ಮಾನ್ಯ ಶ್ರೀ ರಘುಪತಿಯವರು ವಿದ್ಯಾ ಸಚಿವರಾಗಿದ್ದಾಗ ಸದನದಲ್ಲೇ ಆಶ್ವಾಸನೆ ಇತ್ತಿದ್ದರು. ಈಗಿನ ಶಿಕ್ಷಣ ಸಚಿವರೂ ಈ ಕುರಿತು ಶೀಘ್ರ ಪರ್ಯಾಲೋಚಿಸುವುದಾಗಿ